# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಎಚ್. ರಸ್ತೆ, ತುಮಕೂರು – 572 103
ದೂರವಾಣಿ : 0816-2254546 0816-2255596, 0816-2255597 ಫ್ಯಾಕ್ಸ್ : 0816-2270719

ಸಂಖ್ಯೆ: ತುವಿ/ಸಂ.ವಿ:/2023-24/970 ದಿನಾಂಕ: 29.01.2024

## ಸುತ್ತೋಲೆ

ವಿಷಯ: ಉನ್ನತ ಶಿಕ್ಷಣ ಪರಿಷತ್ತಿನ ವತಿಯಿಂದ "ಮಾಸಿಕ ಸಂಶೋಧನಾ ಉಪನ್ಯಾಸ ಸರಣಿ" **(Monthly Research Lecture Series)** ಕಾರ್ಯಕ್ರಮವನ್ನು ಆಯೋಜಿಸುವ ಕುರಿತು.

ಉಲ್ಲೇಖ:
1. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರ ಪತ್ರ ಸಂಖ್ಯೆ:KSHEC/156/Research Lecture Series/2023-24/41 ದಿನಾಂಕ:20.01.2024.
2. ಪ್ರೊ. ಎಸ್ ಆರ್ ನಿರಂಜನ, ಉಪಾಧ್ಯಕ್ಷರು, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: KSHEC/156/Research Lecture Series/2023-24/57 ದಿನಾಂಕ:26.01.2024.
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 25.01.2024 (ಕಂಡಿಕೆ-155).

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ವತಿಯಿಂದ ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾನಿಲಯಗಳನ್ನೊಳಗೊಂಡ **"Research Day of Council"** ಎಂಬ ಹೆಸರಿನಲ್ಲಿ ಆನ್‌ಲೈನ್ **"ಮಾಸಿಕ ಸಂಶೋಧನಾ ಉಪನ್ಯಾಸ ಸರಣಿ" (Monthly Research Lecture Series)** ಯನ್ನು ಆಯೋಜಿಸಲು ಉದ್ದೇಶಿಸಲಾಗಿದ್ದು ವಿಶ್ವವಿದ್ಯಾನಿಲಯದ ಅಧ್ಯಾಪಕರು, ಸಂಶೋಧಕರು ಮತ್ತು ವಿದ್ಯಾರ್ಥಿಗಳು ತಮ್ಮ ಇತ್ತೀಚಿನ ಸಂಶೋಧನೆಗಳ ಬಗ್ಗೆ ಜ್ಞಾನವನ್ನು ಹಂಚಿಕೊಳ್ಳುವುದು ಹಾಗೂ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು ಇದರ ಉದ್ದೇಶವಾಗಿರುತ್ತದೆ.

ಈ ಸಂಬಂಧ, ಸದರಿ ಸರಣಿಯ ಮೊದಲ **"ಮಾಸಿಕ ಸಂಶೋಧನಾ ಉಪನ್ಯಾಸ ಸರಣಿ" (Monthly Research Lecture Series)** ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು **ದಿನಾಂಕ: 31.01.2024 ರ ಬುಧವಾರ ಬೆಳಗ್ಗೆ 11.00 ಗೆ ಆನ್‌ಲೈನ್** ಮುಖಾಂತರ ಆಯೋಜಿಸಲಾಗಿದ್ದು, **ಉಪನ್ಯಾಸ ಸರಣಿಯ ಉದ್ಘಾಟನೆಯನ್ನು ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಶ್ರೀಕರ್ ಎಂ ಎಸ್ ಹಾಗೂ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರಾದ ಪ್ರೊ. ಎಸ್ ಆರ್ ನಿರಂಜನ ರವರು ನಡೆಸಿಕೊಡುವರು.** ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಾಪಕರು, ಸಂಶೋಧಕರು ಹಾಗೂ ವಿದ್ಯಾರ್ಥಿಗಳು ಸದರಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮೈಸೂರು ವಿಶ್ವವಿದ್ಯಾನಿಲಯದ ಈ ಕೆಳಕಂಡ ಆಯ್ದ ಸಂಪನ್ಮೂಲ ವ್ಯಕ್ತಿಗಳು ನೀಡುವ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆಯುವಂತೆ ಈ ಮೂಲಕ ತಿಳಿಸಲಾಗಿದೆ.

| ಕ್ರ.ಸಂ | ಸಂಪನ್ಮೂಲ ವ್ಯಕ್ತಿಗಳ ವಿವರ | ಶೀರ್ಷಿಕೆ | ಸಮಯ |
|---|---|---|---|
| 01 | Prof. S Nagaraja<br>Dept. of Studies in Commerce & Director, PMEB, University of Mysore | Study of Agri. Farm Business Models to Empower Women Agripreneurs for Rural Development | 11.30 AM |
| 02 | Prof. K Kemparaju<br>Dept. of Studeis in Biochemistry University of Mysore | Echis Carinatus Venom Induced Sustained Tissue Destruction, Pathophysiology and Strategic Remedy | 12.10 PM |

| | | | |
|---|---|---|---|
| 03 | Prof. Vijayakumari S Karikal<br>Kuvempu Institute of Kannada Studeis. University of Mysore | ವಚನಗಳಲ್ಲಿ ಪ್ರಾಣಿ ರೂಪಕಗಳು | 2.00 PM |
| 04 | Prof. K Ramachandra Kini<br>Dept. of Studies in Biotechnology, University of mysore | Molecular and Proteomic Approaches in Plant Microbe Interaction | 2.40 PM |
| 05 | Prof. Navitha Thimmaiah<br>Dept. of Studies in Economics | Achieving Sustainability in Higher Education or Role of Higher Education in Economic Development or Higher Education and Economic Development of Karnataka | 3.20 PM |

ವಿಶೇಷ ಸೂಚನೆ: "ಮಾಸಿಕ ಸಂಶೋಧನಾ ಉಪನ್ಯಾಸ ಸರಣಿ" **(Monthly Research Lecture Series)** ಕಾರ್ಯಕ್ರಮವನ್ನು https://meet.google.com/pea-ugjx-jjd ಆನ್‌ಲೈನ್ ಲಿಂಕ್ ಮುಖಾಂತರ ಪಾಲ್ಗೊಳ್ಳಬಹುದು.

ಆದೇಶದ ಮೇರೆಗೆ,

29/01/2024

ನಿರ್ದೇಶಕರು-ಸಂಶೋಧನೆ (ಪ್ರ)

Director - Research
Tumkur University
Tumkur-572103

ಇವರಿಗೆ,

1. ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಕ್ಷರು/ಸಂಯೋಜಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ತಮ್ಮ ವಿಭಾಗದಲ್ಲಿನ ಅಧ್ಯಾಪಕರು, ಸಂಶೋಧನಾರ್ಥಿಗಳು ಮತ್ತು ವಿದ್ಯಾರ್ಥಿಗಳು ಸದರಿ ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕ್ರಮವಹಿಸುವುದು)
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು)

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಸಚಿವರು ಆಪ್ತ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ.